ಕಟ್ಟಿ ಹುಳುಗಳು ಬೆಳೆಯನ್ನು ನಾಶ ಮಾಡತಕ್ಕ ಪರಿಸ್ಥಿತಿ ಉಂಟಾದುದು ದುರಾದೃಷ್ಟ. ಹೀಗಿರುವಾಗ ಯಾವ ರೀತಿ ಬೆಳೆ ಮೇಲೆ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆ, ಎಷ್ಟು ಕೊಡಬಹುದು ಎಂಬುದಕ್ಕೆ ಬದಲಾಗಿ ಉಪಕರಣಗಳನ್ನು, ಔಷಧಿಗಳನ್ನು ಉಪಯೋಗಿಸುವುದಕ್ಕೆ ಮತ್ತು ಇನ್ನು ಯಾವ ರೀತಿ ಸಹಾಯ ಮಾಡಬಹುದೆಂದು ಸರ್ಕಾರ ಆಲೋಚನೆ ಮಾಡಿ ತೀರ್ಮಾನ ಕೈಗೊಳ್ಳುತ್ತದೆಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು:– ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ಮಂತ್ರಿಗಳ ಹತ್ತಿರ ಹೋಗಿ ಮಾತನಾಡುವುದು.

ಶಿಕ್ಷಣ ಸಂಸ್ಥೆಗಳವರು ಸರ್ಕಾರಿ ಜಮೀನನ್ನು ಕೋರಿರುವ ಬಗ್ಗೆ

421. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದಾಗಿ ಡೆಂಟಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಮತ್ತು 'ಬಿ'ಫಾರ್ಮ ಕಾಲೇಜು ಪ್ರಾರಂಭಿಸಲು ಅನುಮತಿ ಪಡೆದ ಎಷ್ಟು ಸಂಸ್ಥೆಯವರು ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಪಡೆಯಲು ಅರ್ಜಿ ಹಾಕಿದ್ದಾರೆ ?

ಆ) ಇವರಲ್ಲಿ ಎಷ್ಟು ಸಂಸ್ಥೆಯವರಿಗೆ ಸರ್ಕಾರಿ ಜಮೀನು ನೀಡಲಾಗಿದೆ ?

ಇ) ಹಾಗಿದ್ದಲ್ಲಿ, ಯಾವ ಆಧಾರದ ಮೇಲೆ ಅವರಿಗೆ ಸರ್ಕಾರಿ ಜಮೀನು ನೀಡಲಾಗಿದೆ ?

ಈ) ಅದಕ್ಕಾಗಿ ಪ್ರತಿ ಎಕರೆಗೆ ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ ?

ಉ) ಒಂದೊಂದು ಸಂಸ್ಥೆಯವರಿಗೆ ಎಷ್ಟೆಷ್ಟು ಜಮೀನು ನೀಡಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:– ಬೆಂಗಳೂರು ನಗರ ಜಿಲ್ಲೆಯಲ್ಲಿ ವಿದ್ಯಾ ಸಂಸ್ಥೆಗಳು ಸರ್ಕಾರಿ ಜಮೀನಿಗೆ ಅರ್ಜಿ ಹಾಕಿಕೊಂಡಿವೆಯೇ ಎಂದರೆ ಇಲ್ಲವೆಂದು ಹೇಳಿದ್ದೀರಿ. ಚಾಮರಾಜ ವಿದ್ಯಾ ಸಂಸ್ಥೆ ಮತ್ತು ಈಸ್ಟ್–ವೆಸ್ಟ್ ವಿದ್ಯಾ ಸಂಸ್ಥೆಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 20–20 ಎಕರೆ ಜಮೀನು ಕೊಟ್ಟಿದ್ದಾರೆ. ವಿದ್ಯಾ ಸಂಸ್ಥೆಯವರು ವಿದ್ಯಾರ್ಥಿಗಳಿಂದ ಹಣ ಪಡೆಯುತ್ತಾರೆ ಮತ್ತು ಸರ್ಕಾರದಿಂದ ಜಮೀನುಗಳನ್ನು ಪಡೆಯುತ್ತಾರೆ. ಅವರು 500 ಎಕರೆ ಕೇಳಿದ್ದರೆ 20 ಎಕರೆ ಕೊಟ್ಟಿದ್ದಾರೆ. ಖಾಸಗಿಯವರಿಂದ 2–3 ಲಕ್ಷ ರೂಪಾಯಿಗಳನ್ನು ಕೊಟ್ಟು ಜಮೀನು ಸ್ವಾಧೀನ ಮಾಡಿಕೊಂಡು ಕೊಟ್ಟಿದ್ದಾರೆ. ಸರ್ಕಾರ ಆ ವಿದ್ಯಾ ಸಂಸ್ಥೆಗಳಿಗೆ ಜಮೀನು ಕೊಟ್ಟಿರುವುದನ್ನು ವಜಾ ಮಾಡಬೇಕು. ನಾನು ಪ್ರಶ್ನೆಯಲ್ಲಿ ನಗರ ಜಿಲ್ಲೆ ಎಂದು ಕೇಳಿದ್ದೇನೆ. ಗ್ರಾಮಾಂತರ ಜಿಲ್ಲೆಯಲ್ಲಿ ವಿದ್ಯಾ ಸಂಸ್ಥೆಗಳಿಗೆ

ಜಮೀನನ್ನು ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಹಾಲಿ ಕೊಟ್ಟಿರತಕ್ಕ ಜಮೀನನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:- ಎಲ್ಲಿಯೂ ಲ್ಯಾಂಡ್ ಗ್ರಾಂಟ್ ಮಾಡಿಲ್ಲ. ಅಂಥದ್ದು ನೋಟೀಸಿಗೆ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ:– ಗ್ರಾಮಾಂತರ ಜಿಲ್ಲೆಯಲ್ಲಿ ಮಾಡಿದ್ದಾರೆ. ಅದು ನಗರ ಜಿಲ್ಲೆಯ ಸಮೀಪದಲ್ಲಿ ಬರುತ್ತದೆ. ಅದನ್ನು ವಜಾ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು:– ಆ ವಿವರಗಳನ್ನು ಮಂತ್ರಿಗಳಿಗೆ ಕಳುಹಿಸಿಕೊಡಿ.

ರಾಜ್ಯದಲ್ಲಿ ನೆರೆ ಹಾವಳಿಯಿಂದ ತೊಂದರೆಗೀಡಾದ ಭತ್ತದ ಬೆಳೆಯ ಪ್ರಮಾಣ

8. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಈ ವರ್ಷ ನಿರೀಕ್ಷಿಸಲಾಗಿರುವ ಒಟ್ಟು ಭತ್ತದ ಬೆಳೆಯ ಪ್ರಮಾಣವೆಷ್ಟು ?

2) ನೆರೆ ಹಾವಳಿಯಿಂದ ತೊಂದರೆಗೀಡಾದ ಭತ್ತ ಬೆಳೆಯುವ ಪ್ರದೇಶಗಳಾವುವು ?

3) ಒಟ್ಟು ಈ ಬೆಳೆಯ ನಷ್ಟದ ಅಂದಾಜು ಮತ್ತು ವಿಸ್ತೀರ್ಣವೆಷ್ಟು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

1. ರಾಜ್ಯದಲ್ಲಿ 1992–93ನೇ ಸಾಲಿಗೆ ಒಟ್ಟು ಭತ್ತದ ಬೆಳೆಯ ನಿರೀಕ್ಷಿಸಲಾಗಿರುವ ಗುರಿ ಈ ಕೆಳಕಂಡಂತಿದೆ.

ವಿಸ್ತೀರ್ಣ (ಲಕ್ಷ ಹೆಕ್ಟೇರುಗಳಲ್ಲಿ)	ಉತ್ಪಾದನೆ (ಲಕ್ಷ ಟನ್ನುಗಳಲ್ಲಿ)
11.26	32.23

2. ಶಿವಮೊಗ್ಗ, ಚಿತ್ರದುರ್ಗ, ಮೈಸೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಉತ್ತರ ಕನ್ನಡ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ನೆರೆ ಹಾವಳಿ ಹಾಗೂ ಅತಿವೃಷ್ಟಿಯಿಂದ 84,179 ಹೆಕ್ಟೇರ್‌ನಷ್ಟು ಪ್ರದೇಶ ಹಾನಿಗೊಳಗಾಗಿರುವುದಾಗಿ ವರದಿಯಾಗಿದೆ.

ಅಂದಾಜು: 2608.81 ಲಕ್ಷ ರೂ.ಗಳು
ವಿಸ್ತೀರ್ಣ: 84,179 ಹೆಕ್ಟೇರುಗಳು

ಶ್ರೀ ಕೆ. ಹರ್ಷಕುಮಾರ ಗೌಡ:– ರಾಜ್ಯದಲ್ಲಿ ನೆರೆ ಹಾವಳಿಯಿಂದ 1992–93ನೇ ಸಾಲಿನಲ್ಲಿ ಸುಮಾರು 11 ಲಕ್ಷ ಹೆಕ್ಟೇರ್‌ನಲ್ಲಿ ಭತ್ತದ ಬೆಳೆ ನಾಶವಾಗಿದೆ ಮತ್ತು 32 ಲಕ್ಷ ಟನ್ ಬೆಳೆ ನಿರೀಕ್ಷೆ ಮಾಡಲಾಗಿತ್ತು ಎಂದು ಉತ್ತರ ಬಂದಿದೆ. ಆದರೆ ಬೆಳೆ ನಷ್ಟವಾದ ಪ್ರದೇಶದ ವಿಸ್ತೀರ್ಣ 84 ಸಾವಿರ ಹೆಕ್ಟೇರ್‌ಗಳು. ನಷ್ಟದ ಅಂದಾಜು ಸುಮಾರು 260.88 ಲಕ್ಷ ರೂಪಾಯಿಗಳು ಎಂದು ಬಂದಿದೆ. ಮತ್ತು ಬೇರೆ ಬೇರೆ ಪ್ರದೇಶದಲ್ಲಿ ಎಂದು ಹೇಳಿದ್ದಾರೆ. ನಾನು ಕೇಳುವುದು ಎಂದರೆ, ಇಡೀ ರಾಜ್ಯದಲ್ಲಿ ಎಷ್ಟು ಜನ ರೈತರಿಗೆ ಈ ಒಂದು ನಷ್ಟ ಆಗಿದೆ ? ಬೇರೆ ಬೇರೆ ಬೆಳೆಗಳಲ್ಲಿ ಎಷ್ಟು ಕೋಟಿ ರೂಪಾಯಿ ನಷ್ಟವಾಗಿದೆ. ಮತ್ತು ಮಾನ್ಯ ಮಂತ್ರಿಗಳು ಬೇರೊಂದು ಪ್ರಶ್ನೆಗೆ ಉತ್ತರ ಕೊಡುವ ಸಮಯದಲ್ಲಿ